ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.

ಸಿಸಿ ನಂಃ 2510/2022

ಪಿ ಡಬ್ಲುಃ 04

ಸಿ ಡಬ್ಲುಃ 05

| | |
|---|---|
| ಸಾಕ್ಷಿದಾರರ ಹೆಸರು | ಶ್ರೀಧರ ಮಂಜು ನಾಯ್ಕ |
| ತಂದೆಯ ಹೆಸರು | ಮಂಜು ನಾಯ್ಕ |
| ವಯಸ್ಸು | 33 |
| ಉದ್ಯೋಗ | ಕೂಲಿ ಕೆಲಸ |
| ವಾಸ್ತವ್ಯ | ಹಾಡಗೇರಿ |

ಸಾಕ್ಷಿಯನ್ನು ದಿನಾಂಕಃ 21-11-2023 ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ಸಾಕ್ಷಿಗೆ ನಿಪಿ. 7 ನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.7 ಬಿ ಎಂದು ಗುರುತಿಸಲಾಯಿತು. ಸದ್ರಿ ದಾಖಲೆಗೆ ನಾನು ದಿಃ06.07.2021 ಹೊನ್ನಾವರ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಚಾಸಾ 1 ರವರು ನನ್ನನ್ನು ಪೋಲಿಸ್ ಠಾಣೆಗೆ ಕರೆದಿರುತ್ತಾರೆ. ಆ ಸಮಯದಲ್ಲಿ 1 ನೇ ಆರೋಪಿ, ಗಣೇಶ ಎನ್ನುವವರು ಹಾಜರಿದ್ದರು. 1 ನೇ ಆರೋಪಿಯು ಬಿಳಿ ಬಣ್ಣದ ಒಂದು ಕಾರನ್ನು ಪೋಲಿಸ್ ಠಾಣೆಯ ಮುಂದೆ ಹಾಜರುಪಡಿಸಿರುತ್ತಾನೆ. ಆರೋಪಿತರು ಚಾಸಾ 1 ರವರ ವಿರುದ್ಧ ಸದ್ರಿ ಕಾರನ್ನು ಕೃತ್ಯಕ್ಕೆ ಬಳಸಿದ್ದರಿಂದ ಸದ್ರಿ ಕಾರನ್ನು ಪೋಲಿಸರು ವಶಕ್ಕೆ ಪಡೆದಿರುತ್ತಾರೆ. ಸದ್ರಿ ಕಾರನ್ನು ಚಾಸಾ 1 ರವರು ಪೋಲಿಸರಿಗೆ ತೋರಿಸಿರುತ್ತಾರೆ. ಸದ್ರಿ ಕಾರಿನ ನಂಬರ್ ಕೆಎ 20 ಎಮ್ ಎ 3160 ಆಗಿತ್ತು. ಪೋಲಿಸರು ಸ್ಥಳದಲ್ಲಿ ಪಂಚನಾಮೆ ಮಾಡಿ ಪೋಟೊವನ್ನು ತೆಗೆದಿದ್ದು ಆಗ ನಾನು ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಸಾಕ್ಷಿ ನಿಪಿ. 8 ರ ಪೋಟೋ ನೋಡಿ ಗುರುತಿಸುತ್ತಾರೆ. ಸಾಕ್ಷಿ ಅದರಲ್ಲಿರುವ ಕಾರನ್ನು ನೋಡಿ ಗುರುತಿಸುತ್ತಾರೆ. ಸದ್ರಿ ಪಂಚನಾಮೆಯನ್ನು ಮಧ್ಯಾಹ್ನ 12 ರಿಂದ 1 ಗಂಟೆಯವರೆಗೆ ಜರುಗಿಸಿರುತ್ತಾರೆ.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲುಃ ಎ ಪಿ ಪಿ ಯವರಿಂದಃ**

ಸದ್ರಿ ದಿನ ಪೋಲಿಸರು ಪಂಚರಾಗಿ ಬರುವಂತೆ ನನ್ನನ್ನು ಮತ್ತು ಚಾಸಾ 4 ರವರನ್ನು ಕರೆದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ವಿ. ಆರ್. ಎನ್. ವಕೀಲರಿಂದಃ**

ನನಗೆ ಚಾಸಾ 1 ರವರು ಸುಮಾರು 13 ವರ್ಷಗಳಿಂದ ಪರಿಚಯಸ್ಥರಾಗಿರುತ್ತಾರೆ. ಚಾಸಾ 1 ರವರು ಒಂದು ಸಣ್ಣ ಗಲಾಟೆ ಆಗಿದೆ ಠಾಣೆಗೆ ಬನ್ನಿ ಎಂದು ಸದ್ರಿ ದಿನ ನನ್ನನ್ನು ಠಾಣೆಗೆ ಕರೆದುಕೊಂಡು ಹೋಗಿದ್ದರು. ಪಂಚನಾಮೆ ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ. ಪಂಚನಾಮೆಯಲ್ಲಿ ಸದ್ರಿ ಕಾರನ್ನು ಯಾವ ದಿಕ್ಕಿಗೆ ನಿಲ್ಲಿಸಿದ್ದಾರೆ ಎಂದು ಬರೆಸಿದಿದ್ದೇನೆ ಎಂದು ನನಗೆ ನೆನಪಿಲ್ಲ. ನಾನು ಸದ್ರಿ ಪಂಚನಾಮೆಯನ್ನು ಓದಿ ನೋಡಿರುವುದಿಲ್ಲ. ಸದ್ರಿ ದಾಖಲೆಯನ್ನು ನಾನು ಓದಿ ನೋಡಿ ಸಹಿ ಮಾಡಿರುವುದಿಲ್ಲ. ಸದ್ರಿ ದಿನ ಚಾಸಾ 4 ರವರು ಕೂಡಾ ನನ್ನ ಮತ್ತು ಚಾಸಾ 1 ರವರ ಜೊತೆಗೆ ಠಾಣೆಗೆ ಬಂದಿದ್ದರು. ಠಾಣೆಗೆ ಕಾರನ್ನು 1 ನೇ ಆರೋಪಿ ಚಲಾಯಿಸಿಕೊಂಡು ಬಂದಿದ್ದ. ನಾವು ಮೊದಲು ಠಾಣೆಗೆ ಹೋಗಿದ್ದು ನಂತರ 1 ನೇ ಆರೋಪಿ ಕಾರನ್ನು ತಂದು ಠಾಣೆಯ ಮುಂದೆ ನಿಲ್ಲಿಸಿದ್ದ. ಸದ್ರಿ ದಿನ ಅವರ ಜೊತೆ ಪೋಲಿಸರು ಬಂದಿದ್ದು ಇರುವುದಿಲ್ಲ. ಈ ಮಾಹಿತಿಯನ್ನು ಪಂಚನಾಮೆಯಲ್ಲಿ ತಿಳಿಸಿದ್ದೀನಾ ಇಲ್ಲವಾ ಎಂದು ನನಗೆ ಈಗ ನೆನಪಿಲ್ಲ. ಈ ದಿನ ನಾನು ಮಾನ್ಯ ಸರ್ಕಾರಿ ವಕೀಲರ ಕಛೇರಿಗೆ ಹೋಗಿ ದಾಖಲೆಯನ್ನು ಓದಿಕೊಂಡಿರುತ್ತೇನೆ. ಠಾಣೆಯ ಹತ್ತಿರ ನಿಲ್ಲಿಸಿದ ವಾಹನದ ಚೆಕ್‌ಬಂದಿ ಹೇಳಲು ಆಗುವುದಿಲ್ಲ. ನನಗೆ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ನನಗೆ ಚಾಸಾ 1 ರವರು ತುಂಬಾ ಆತ್ಮೀಯರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.